## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಹೆಚ್.ಎಸ್ ರಂಗನಾಥಸ್ವಾಮಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿಂತಾಮಣಿ (ಪ್ರಸ್ತುತ ನಿವೃತ್ತ) ಇವರ ವಿರುದ್ಧದ ದಂಡನಾದೇಶವನ್ನು ಕೆಎಟಿ ಅರ್ಜಿ ಸಂಖ್ಯೆ: 4012/2018ರಲ್ಲಿನ ದಿನಾಂಕ: 08.06.2021ರ ತೀರ್ಪಿನನ್ವಯ ಹಿಂಪಡೆಯುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಕಾರಣ ಕೇಳುವ ನೋಟಿಸ್ ಸಂಖ್ಯೆ: ಗ್ರಾಅಪ 10 ವಿಸೇಬಿ 2012, ದಿನಾಂಕ: 15.05.2014.
2) ಶ್ರೀ ಹೆಚ್.ಎಸ್ ರಂಗನಾಥಸ್ವಾಮಿ ಇವರ ಲಿಖಿತ ಹೇಳಿಕೆ ದಿನಾಂಕ: 09.01.2015.
3) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 10 ವಿಸೇಬಿ 2012, ದಿನಾಂಕ: 16.02.2018.
4) ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ: 4012/2018ರಲ್ಲಿ ದಿನಾಂಕ: 08.06.2021ರಂದು ನೀಡಿರುವ ಆದೇಶ.

*****

**ಪ್ರಸ್ತಾವನೆ:-**

ಶ್ರೀ ಹೆಚ್.ಎಸ್ ರಂಗನಾಥಸ್ವಾಮಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚಿಂತಾಮಣಿ, ಚಿಕ್ಕಬಳ್ಳಾಪುರ (ಮೂಲತಃ ಅರಣ್ಯ ಇಲಾಖೆಯ ಅಧಿಕಾರಿ) ಇವರು ನಿಯೋಜನೆ ಮೇಲೆ ದಿನಾಂಕ: 25.08.2010 ರಿಂದ 06.09.2011ರವರೆಗೆ ಚಿಂತಾಮಣಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಚಿಂತಾಮಣಿ ತಾಲ್ಲೂಕು ಪಂಚಾಯತಿಯ ಉಲವಾಡಿ ಗ್ರಾಮದ ಶ್ರೀ ಎಂ.ವೆಂಕಟರಾಮರೆಡ್ಡಿ ಇವರು ವಾಸ ಮಾಡುತ್ತಿರುವ ನಿವೇಶನವು ಸರ್ಕಾರಿ ಶಾಲೆಗೆ ಸೇರಿದೆ ಎಂಬುದು ಮತ್ತು ಈ ಸಂಬಂಧ ಶ್ರೀ ಎಂ.ವೆಂಕಟರಾಮರೆಡ್ಡಿ ಇವರು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಾಲಯವು ವಜಾಗೊಳಿಸಿ, ಅರ್ಜಿದಾರರಿಗೆ ದಂಡನೆ ವಿಧಿಸಿದ್ದರೂ ಸಹ ಸದರಿ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳದೇ ಅವರೊಂದಿಗೆ ಶಾಮೀಲಾಗಿ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡಲು ಅವಕಾಶ ಕಲ್ಪಿಸಿ ಸರ್ಕಾರದ ಆಸ್ತಿಯನ್ನು ಸಂರಕ್ಷಿಸುವಲ್ಲಿ ವಿಫಲರಾಗಿರುತ್ತಾರೆಂಬ ಆರೋಪದ ಮೇಲೆ ಸದರಿಯವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ನಿರ್ಣಯಿಸಿ, ಮೇಲೆ ಕ್ರ.ಸಂ (1)ರಲ್ಲಿ ಓದಲಾದ ಕ.ನಾ.ಸೇ (ವ,ನಿ&ಮೇ) ನಿಯಮಗಳು, 1957ರ **ನಿಯಮ 12(1)(ಎ)**ರಡಿ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಹೇಳಿಕೆ ಏನಾದರೂ ಇದ್ದಲ್ಲಿ ಲಿಖಿತ ಮೂಲಕ ತಿಳಿಸುವಂತೆ ಆಪಾದಿತರಿಗೆ ಸೂಚಿಸಲಾಗಿತ್ತು.

..2

ಅದರನ್ವಯ, ಆಪಾದಿತರು ಮೇಲೆ ಕ್ರ.ಸಂ (2)ರಲ್ಲಿ ಓದಲಾದ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ತಮ್ಮ ವಿರುದ್ಧದ ಆರೋಪವನ್ನು ನಿರಾಕರಿಸಿ, ಸದರಿ ಪ್ರಕರಣದಲ್ಲಿ ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲವೆಂದು ತಿಳಿಸುತ್ತಾ, ತಮ್ಮನ್ನು ದೋಷಾರೋಪ ಮುಕ್ತಗೊಳಿಸುವಂತೆ ಕೋರಿದ್ದರು. ಸದರಿ ಲಿಖಿತ ಹೇಳಿಕೆಯನ್ನು ಪರಿಶೀಲಿಸಲಾಗಿ, ಅವರ ವಿರುದ್ಧದ ಆರೋಪಗಳನ್ನು ಅಲ್ಲಗೆಳೆಯಬಹುದಾದ ಯಾವುದೇ ಪೂರಕ ದಾಖಲೆಗಳು ಕಂಡುಬಾರದೇ ಇದ್ದುದರಿಂದ, ಮೇಲೆ ಕ್ರ.ಸಂ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ, ಸದರಿಯವರಿಗೆ ಕ.ನಾ.ಸೇ (ವ,ನಿ&ಮೇ) ನಿಯಮಗಳು 1957ರ ನಿಯಮ 8(iii) ರನ್ವಯ ಅವರ **ಕಾಲಿಕ ವೇತನ ಶ್ರೇಣಿಯಲ್ಲಿ ಒಂದು (1) ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ** ದಂಡನೆಯನ್ನು ವಿಧಿಸಲಾಗಿತ್ತು.

ಸರ್ಕಾರದ ಸದರಿ ದಂಡನಾದೇಶವನ್ನು ಪ್ರಶ್ನಿಸಿ, ಶ್ರೀ ಹೆಚ್.ಎಸ್ ರಂಗನಾಥಸ್ವಾಮಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚಿಂತಾಮಣಿ ಇವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ: 4012/2018ನ್ನು ದಾಖಲಿಸಿದ್ದು, ಸದರಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮಂಡಳಿಯು ಮೇಲೆ ಕ್ರ.ಸಂ (4)ರಲ್ಲಿ ಓದಲಾದ ದಿನಾಂಕ: 08.06.2021ರ ಆದೇಶದಲ್ಲಿ ಈ ಕೆಳಕಂಡಂತೆ ತೀರ್ಪು ನೀಡಿ, **ಅರ್ಜಿದಾರರಿಗೆ ವಿಧಿಸಿರುವ ದಂಡನೆಯು ಲಘುದಂಡನೆ ಆಗಿದ್ದರೂ ಸಹ ಸದರಿ ದಂಡನೆಯನ್ನು ವಿಧಿಸುವ ಮುನ್ನ ಆಪಾದಿತರಿಗೆ ಅವರ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ರಕ್ಷಣಾ ಹೇಳಿಕೆಯನ್ನು ಸಲ್ಲಿಸಲು ಅವಕಾಶ ಕೊಟ್ಟು ಆಪಾದಿತರು ತಮ್ಮ ವಿರುದ್ಧದ ಆರೋಪಗಳನ್ನು ತಿರಸ್ಕರಿಸಿದ್ದಲ್ಲಿ, ಈ ಸಂಬಂಧ ಇಲಾಖಾ ವಿಚಾರಣೆ ಕೈಗೊಳ್ಳಲು ಕ್ರಮವಹಿಸಬೇಕಾಗುತ್ತದೆಂದು ನಿರ್ಣಯಿಸಿ ಸರ್ಕಾರದ ದಂಡನಾದೇಶವನ್ನು ತಳ್ಳಿಹಾಕುತ್ತಾ, ಆರೋಪಿತರ ವಿರುದ್ಧ ನಿಯಮಾನುಸಾರ ಇಲಾಖಾ ವಿಚಾರಣೆ ನಡೆಸಲು ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಸ್ವಾತಂತ್ರ್ಯವನ್ನು ನೀಡಿ, ಅರ್ಜಿಯನ್ನು ಪುರಸ್ಕರಿಸಿರುತ್ತದೆ.**

> *Accordingly, the Application is allowed and impugned order bearing No: ಗ್ರಾಅಪ 10 ವಿಸೇಬಿ 2012, Dated: 16.02.2018 passed by the 1st respondent and produced as per Annexure A3, is herby set aside. However, with liberty to the respondent authorities to conduct the regular enquiry and to proceed in accordance with law.*

ನ್ಯಾಯಮಂಡಳಿಯ ಆದೇಶದನ್ವಯ ಪರಿಶೀಲಿಸಲಾಗಿ, ಆಪಾದಿತರಿಗೆ ಕರ್ನಾಟಕ ನಾಗರೀಕ ಸೇವಾ (ವ,ನಿ&ಮೇ) ನಿಯಮಗಳು, 1957ರ ನಿಯಮ 8(iii)ರನ್ವಯ "ಅವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ" ದಂಡನೆ ವಿಧಿಸಲಾಗಿರುವ ಸರ್ಕಾರದ ದಂಡನಾದೇಶವನ್ನು ನ್ಯಾಯಮಂಡಳಿಯು ತಳ್ಳಿ ಹಾಕಿರುವುದರಿಂದ ಮತ್ತು ಆಪಾದಿತರು

ದಿನಾಂಕ: 31.07.2021ರಂದು ಸರ್ಕಾರಿ ಸೇವೆಯಿಂದ ಈಗಾಗಲೇ ವಯೋನಿವೃತ್ತಿ ಹೊಂದಿದ್ದು, ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಹೊಸದಾಗಿ ವಿಚಾರಣೆ ನಡೆಸಲು/ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ, 1958ರ ನಿಯಮ 214(2)(ಬಿ)(ii)ರನ್ವಯ ಅವಕಾಶವಿದ್ದ 4 ವರ್ಷಗಳ ಕಾಲಮಿತಿಯು ಮುಕ್ತಾಯವಾಗಿರುವುದರಿಂದ ದಿನಾಂಕ: 16.02.2018ರ ದಂಡನಾದೇಶವನ್ನು ಹಿಂಪಡೆಯಲು ಸರ್ಕಾರವು ನಿರ್ಧರಿಸಿದೆ. ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 64 ವಿಸೇಬಿ 2021 ಬೆಂಗಳೂರು,**
**ದಿನಾಂಕ: 16.09.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಹೆಚ್.ಎಸ್ ರಂಗನಾಥಸ್ವಾಮಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿಂತಾಮಣಿ (ಮೂಲತಃ ಅರಣ್ಯ ಇಲಾಖೆಯ ಅಧಿಕಾರಿ) ಇವರಿಗೆ ಕರ್ನಾಟಕ ನಾಗರೀಕ ಸೇವಾ (ವ,ನಿ&ಮೇ) ನಿಯಮಗಳು, 1957ರ ನಿಯಮ 8(iii)ರನ್ವಯ "ಅವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ" ದಂಡನೆಯನ್ನು ವಿಧಿಸಿದ್ದ **ಸರ್ಕಾರದ ದಂಡನಾದೇಶ ಸಂಖ್ಯೆ: ಗ್ರಾಅಪ 10 ವಿಸೇಬಿ 2012, ದಿನಾಂಕ: 16.02.2018ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದು** ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

16/09/2022
**(ಬಾಲಪ್ಪ)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

16/09/2022

**ಇವರಿಗೆ,**

1) ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಜಿಲ್ಲೆ.
4) ಸರ್ಕಾರಿ ವಕೀಲರು, ಅಡ್ವೋಕೇಟ್ ಜನರಲ್‌ರವರ ಕಛೇರಿ, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಬೆಂಗಳೂರು.
5) ಆಪಾದಿತ ಅಧಿಕಾರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿಕ್ಕಬಳ್ಳಾಪುರ ಇವರ ಮುಖಾಂತರ).

6) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
7) ಮಾಹಿತಿ ಕೇಂದ್ರ/ಶಾಖಾ ರಕ್ಷಕ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ ಮಾಹಿತಿಗಾಗಿ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಉಪ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

*****